– –

**ಓ ಎಸ್ ನಂಃ 263/2020**

**ಪಿಡಬ್ಲ್ಯೂ: 02**

**<u>ದಿನಾಂಕಃ 08.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು</u>**

**<u>ಪಾಟಿ ಸವಾಲುಃ ಶ್ರೀ ಜಿ.ವಿ.ಆರ್., 2 , 7 ಮತ್ತು 8 ನೇ ಪ್ರತಿವಾದಿ ಪರ ವಕೀಲರಿಂದ</u>**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ತವರು ಮನೆ ಪರಶುರಾಂಪುರ ಗ್ರಾಮ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಿಕೆಯಲ್ಲಿ ಏನು ಬರೆದಿದೆ ಎಂದು ನನಗೆ ಮಾಹಿತಿ ಇರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಿಕೆಯಲ್ಲಿರುವ ಮಾಹಿತಿಯನ್ನು 2 ನೇ ವಾದಿಯು ಹೇಳಿ ಬರೆಸಿರುತ್ತಾರೆ. ನಾನು 2 ನೇ ವಾದಿಯೊಂದಿಗೆ ವಿಶ್ವಾಸದಿಂದ ಇರುತ್ತೇನೆ ಎಂದರೆ ಸೋದರ ಮಾವನ ಮಗಳಾದ ಕಾರಣ ವಿಶ್ವಾಸದಿಂದ ಇರುತ್ತೇನೆ ಎಂದು ನುಡಿಯುತ್ತಾರೆ.

ಈ ದಾವೆಯನ್ನು ಪಾಲು ವಿಭಾಗಕ್ಕಾಗಿ ಸಲ್ಲಿಸಲಾಗಿರುತ್ತದೆ. ಈ ದಾವೆಯ ಪ್ರತಿವಾದಿಯರೆಂದರೆ ಶಿವಕುಮಾರ್, ಅಯ್ಯಣ್ಣ, ಕರಿಯಮ್ಮ, ತನುಜಮ್ಮ, ಮಾರಕ್ಕ, ಲಕ್ಷ್ಮಿದೇವಿ ಮತ್ತು ಮಂಜುಳಮ್ಮ .

ಮೂಲ ಪುರುಷ ಅಯ್ಯಪ್ಪ ಯಾನೆ ಅಯ್ಯಣ್ಣ ಬಿನ್ ಅಜ್ಜಪ್ಪರವರಿಗೆ 3 ಜನ ಗಂಡು ಮಕ್ಕಳು, ಸದರಿಯವರುಗಳೆಂದರೆ ಈರಣ್ಣ, ಅಜ್ಜಪ್ಪ ಮತ್ತು ಚನ್ನಮಲ್ಲಪ್ಪ. ನಾಲ್ಕು ಜನ ಹೆಣ್ಣು ಮಕ್ಕಳು, ಸದರಿಯವರುಗಳೆಂದರೆ ಮಲ್ಲಕ್ಕ, ಹೊನ್ನಮ್ಮ, ಓಬಕ್ಕ, ತಿಮ್ಮಕ್ಕ. ಸದರಿಯವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ. ನಾನು ಸಂಬಂಧಿಕಳಾಗಿರುವ ಕಾರಣ ಅಜ್ಜಣ್ಣ ಬಿನ್ ಅಯ್ಯಪ್ಪ ರವರಿಗೆ ಇಬ್ಬರು ಹೆಂಡತಿಯರು ಇದ್ದರು ಎಂಬ ವಿಚಾರ ಗೊತ್ತಿರುತ್ತದೆ. ಸಾಕ್ಷಿಯು ಮುಂದುವರಿದು ಸದರಿಯವರ ಮನೆಯಲ್ಲಿಯೇ ಹುಟ್ಟಿ ಬೆಳೆದಿರುತ್ತೇನೆ ಎಂದು ನುಡಿಯುತ್ತಾರೆ . ನನ್ನ ತಾಯಿಯ ತವರು ಮನೆ ಸಹಾ ಪರಶುರಾಮಪುರ ಗ್ರಾಮವಾಗಿರುತ್ತದೆ. ನನ್ನ ಗಂಡನ ಮನೆ ಕೊಡ್ಲಹಳ್ಳಿ ಗ್ರಾಮ.

ದಾವಾ ಸ್ವತ್ತಿನ ಸರ್ವೆ ನಂಬರ್ 104/1 ಆಗಿರುತ್ತದೆ. ದಾವಾ ಸ್ವತ್ತಿನ ಚಕ್ಕುಬಂದಿ ಪೂರ್ವಃ ಗೋವಿಂದಪ್ಪ ರವರ ಜಮೀನು, ಪಶ್ಚಿಮಃ ಚನ್ನಮಲ್ಲಪ್ಪನ ಜಮೀನು ಉತ್ತರಃ ನಾಗರಾಜಪ್ಪನ ಜಮೀನು, ದಕ್ಷಿಣಃ ಪರಮೇಶ್ವರಪ್ಪ ನವರ ಜಮೀನು. ದಾವಾ ಸ್ವತ್ತಿನ ವಿಸ್ತೀರ್ಣ 3 ಎಕರೆ 2 ಗುಂಟೆ ಆಗಿರುತ್ತದೆ. 1 ನೇ ವಾದಿಯು ಸುಮಾರು 20–30 ವರ್ಷಗಳ ಕಾಲ ಪರಶುರಾಂಪುರದಲ್ಲಿ ವಾಸವಾಗಿದ್ದರು. ದಾವಾ ಸ್ವತ್ತು ಈರಣ್ಣ, ಅಜ್ಜಪ್ಪ ಮತ್ತು ಚನ್ನಮಲ್ಲಪ್ಪರವರ ಜಂಟಿ ಸ್ವಾಧೀನಾನುಭವದಲ್ಲಿರುತ್ತದೆ. ದಾವಾ ಸ್ವತ್ತಿನಲ್ಲಿ ಭತ್ತ, ರಾಗಿ ಹಾಗೂ ತರಕಾರಿಗಳನ್ನು ಬೆಳೆಯುತ್ತಿದ್ದೆವು. ದಾವಾ ಸ್ವತ್ತಿನ ಉಸ್ತುವಾರಿಯನ್ನು ಅಜ್ಜಪ್ಪನ ಮಗ ಕುಮಾರ್ ರವರು ನೋಡಿಕೊಳ್ಳುತ್ತಿದ್ದರು. ವಾದಿಯರು ದಾವಾ ಸ್ವತ್ತಿನಲ್ಲಿ ಸಾಗುವಳಿ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಈ ದಿನ ನಾನು 2 ನೇ ವಾದಿಯೊಂದಿಗೆ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿ.2 ನೇ ವಾದಿ ಹೇಳಿಕೊಟ್ಟ ರೀತಿ ನಾನು ಸಾಕ್ಷ್ಯ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಿಕೆಯನ್ನು ಭಾಗ್ಯಮ್ಮ ರವರು ಬರೆಸಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹಾ 2 ನೇ ವಾದಿ ಹೇಳಿಕೊಟ್ಟ ರೀತಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿ ಮತ್ತು ಪ್ರತಿವಾದಿಯರ ಸಂಬಂಧಿಕಳಲ್ಲದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಓ ಎಸ್ ನಂಃ 263/2020**

**ಪಿಡಬ್ಲ್ಯೂ.: 02**

**<u>ಮರು ವಿಚಾರಣೆಃ</u>** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.